**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 34/2025** ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ.3

| | |
|---|---|
| ಸಾಕ್ಷಿದಾರರ ಹೆಸರು | ಗೌತಮ್ |
| ತಂದೆಯ ಹೆಸರು | ಗಣೇಶ್ |
| ವಯಸ್ಸು | 35 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಚಿಟ್ಪಾಡಿ, ಉಡುಪಿ |

ದಿನಾಂಕಃ 18-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಕ್ಯಾಟರಿಂಗ್ ನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ಸುಮಾರು 5-6 ತಿಂಗಳ ಹಿಂದೆ ನಾನು ಕಲ್ಸಂಕದಿಂದ ನಮ್ಮ ಮನೆಯ ಕಡೆಗೆ ಕೃಷ್ಣ ಮಠದ ಹಿಂಭಾಗದಲ್ಲಿರುವ ಕಲ್ಸಂಕದಿಂದ ಮಠದ ಕಡೆಗೆ ಬರುವ ರಸ್ತೆಯಲ್ಲಿ ನಾನು ನಡೆದುಕೊಂಡು ಹೋಗುತ್ತಿದ್ದೆ, ಆಗ ರಾತ್ರಿಯ ಸುಮಾರು 10.00 ಗಂಟೆಯ ಸಮಯ. ಮಠದ ಗೇಟ್ ಬಳಿ ಗುಂಪಿನಲ್ಲಿ ಗಲಾಟೆ ಆಗುತ್ತಿತ್ತು. ಅದರಲ್ಲಿ ಒಬ್ಬ ವ್ಯಕ್ತಿ ಓಡಿ ಹೋಗಿದ್ದ, ಇನ್ನೊಬ್ಬ ವ್ಯಕ್ತಿ ಆತನನ್ನು ಬೆನ್ನಟ್ಟಿ ಬರುತ್ತಿದ್ದ. ನಂತರ ಮೊದಲು ಓಡಿ ಹೋಗಿದ್ದ ವ್ಯಕ್ತಿಯ ಮುಖದಲ್ಲಿ ಗಾಯವಾಗಿ ರಕ್ತ ಬರುತ್ತಿತ್ತು, ಅದು ಹೇಗೆ ಆಗಿತ್ತು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಕಣ್ಣಿನ ಬಳಿಯೂ ಕೂಡಾ ಗಾಯವಾಗಿತ್ತು, ಅದು ಯಾರಿಂದ, ಹೇಗೆ ಆಗಿತ್ತು ಎಂದು ಗೊತ್ತಿಲ್ಲ. ಆದಿನ ನನಗಲ್ಲದೆ ಬೇರೆ ಯಾರಿಗೆ ಗಾಯವಾಗಿತ್ತು ಎಂದು ಗೊತ್ತಿಲ್ಲ.

2) ಆದಿನ ನನಗಾದ ಗಾಯಗಳಿಂದ ಕಣ್ಣು ಮಂಜುಗಟ್ಟಿತ್ತು, ಮುಂದೆ ಏನಾಗಿತ್ತು ಎಂದು ಗೊತ್ತಿಲ್ಲ. ಪೊಲೀಸರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನಾನು ಉಪಚಾರ ಪಡೆದಿದ್ದೆ. ಈದಿನ ನನಗೆ ವಿ.ಸಿ ಮೂಲಕ

ತೋರಿಸಿದ ಆರೋಪಿಯನ್ನು ಆದಿನ ನಾನು ನೋಡಿಲ್ಲ. ಆದಿನ ನನಗೆ ಗಾಯ ಹೇಗೆ, ಯಾರಿಂದ ಆಗಿತ್ತು ಎಂದು ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅವಕಾಶ ಕೋರಿದ್ದು, ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ತಾರೀಕು 20-03-2025 ರಂದು ರಾತ್ರಿ ನಾನು ಮಠಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಮಠದಿಂದ ಮನೆಗೆ ಹೋಗುವ ಸಮಯದಲ್ಲಿ ಮಠದ ಪೂರ್ವ ಬದಿಯ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಓಡಿಸಿಕೊಂಡು ಹೋಗುತ್ತಿದ್ದ ಎಂದರೆ ಗೊತ್ತಿಲ್ಲ. ಬೆನ್ನು ಹತ್ತಿದ ವ್ಯಕ್ತಿ ಮುಂದೆ ಹೋಗುತ್ತಿದ್ದ ವ್ಯಕ್ತಿಯನ್ನು ಅವಾಚ್ಯವಾಗಿ ಬೈದು, ಎಲ್ಲಿಗೆ ಓಡುತ್ತಿ ಎಂದು, ನಿನ್ನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಬೆನ್ನಟ್ಟಿದ್ದ ಎಂದರೆ ಸರಿಯಲ್ಲ. ಬೆನ್ನಟ್ಟಿದ್ದ ವ್ಯಕ್ತಿ ಚಾಕುವಿನಿಂದ ಮುಂದೆ ಹೋಗುತ್ತಿದ್ದ ವ್ಯಕ್ತಿಯನ್ನು ಹಲ್ಲೆ ಮಾಡಿದ್ದ ಎಂದರೆ ಸರಿಯಲ್ಲ. ನಾನು ಆ ಗಲಾಟೆಯನ್ನು ತಪ್ಪಿಸಲು ಹೋದಾಗ ಚಾಕು ಹಿಡಿದ ವ್ಯಕ್ತಿ ನನಗೂ ಕೂಡಾ ಹಲ್ಲೆ ಮಾಡಿಲ್ಲ ಎಂದರೆ, ಆದಿನ ನನಗೂ ಗಾಯವಾಗಿತ್ತು. ಅದು ಯಾರಿಂದ, ಹೇಗೆ ಎಂದು ಗೊತ್ತಿಲ್ಲ. ಆದಿನ ನನ್ನಂತೆ ತಡೆಯಲು ಬಂದ ಚಾಸಾ-2 ಈತನಿಗೂ ಸಹ ಚಾಕು ಹಿಡಿದ ವ್ಯಕ್ತಿ ಹಲ್ಲೆ ಮಾಡಿದ್ದ ಎಂದರೆ ಸರಿಯಲ್ಲ. ಆದಿನ ಅಲ್ಲಿ ಜನ ಸೇರಿದ್ದರಿಂದ ಹಲ್ಲೆ ಮಾಡಿದ ವ್ಯಕ್ತಿ ಅಲ್ಲಿಂದ ಓಡಿದ್ದ ಎಂದರೆ, ನನ್ನ ಕಣ್ಣು ಮಂಜಾಗಿತ್ತು ಆದ್ದರಿಂದ ಏನೂ ಕಂಡಿಲ್ಲ. ಆದಿನ ನಂತರ ನನಗೆ ಗಾಯಗೊಂಡಿದ್ದವರ ಹೆಸರು ತಿಳಿದು, ಅದಕ್ಕಾಗಿ ಈಗ ಓದಿದ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-1** ಎಂದು ಗುರುತಿಸಿದ್ದೆ.

2) ಆದಿನ ನನಗೆ ವಿಸಿ ಮೂಲಕ ತೋರಿಸಿದ ವ್ಯಕ್ತಿಯೇ ನನಗೆ ಮತ್ತು ಚಾಸಾ-1 ಮತ್ತು 2 ಇವರಿಗೆ ಚಾಕುವಿನಿಂದ ಹಲ್ಲೆ ಮಾಡಿದ್ದ ಎಂದರೆ ಸರಿಯಲ್ಲ. ಆದಿನ ಚಾಸಾ-1 ಮತ್ತು 2 ಮೊಬೈಲ್ ನೋಡುತ್ತಾ ಕುಳಿತ್ತಿದ್ದಾಗ, ಆರೋಪಿ ಚಾಸಾ-1 ಇವರ ಮೊಬೈಲ್ ಕೇಳಿದ್ದು, ಅವರು ಕೊಡದೇ ಇದ್ದಾಗ, ಅವರಿಗೆ ಹಲ್ಲೆ ಮಾಡಲು

ಹೋಗುತ್ತಿದ್ದ ಎಂದರೆ ಗೊತ್ತಿಲ್ಲ. ಆರೋಪಿಯ ಹಲ್ಲೆಯನ್ನು ನಾನು ತಡೆಯಲು ಹೋದಾಗ ನನಗೂ ಸಹ ಹಲ್ಲೆ ಮಾಡಿದ್ದ ಎಂದರೆ ಸರಿಯಲ್ಲ. ಆರೋಪಿಯೇ ಆದಿನ ನನಗೆ ಹಲ್ಲೆ ಮಾಡಿದ್ದರೂ ಸಹ ಈಗ ನಾನು ಆತನಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

1) ನಾನು ಗಲಾಟೆಯನ್ನು ಗಮನಿಸುತ್ತಿದ್ದಾಗ ಕತ್ತಲಾಗಿತ್ತು. ಅಲ್ಲಿ ಬೀದಿ ದೀಪಗಳು ಸಹ ಉರಿಯುತ್ತಿರಲಿಲ್ಲ. ಆದಿನ ನಾನು ನೋಡಿದ ಘಟನೆ ಮುಖ್ಯರಸ್ತೆಯಲ್ಲಿ ಆಗಿದ್ದು. ಆದಿನ ನಾನು ಪ್ರಥಮ ಚಿಕಿತ್ಸೆ ಪಡೆದಿದ್ದೆ. ಪೊಲೀಸರು ನನ್ನನ್ನು ಉಪಚಾರಕ್ಕಾಗಿ ಕರೆದುಕೊಂಡು ಹೋಗಿದ್ದರು. ಆದಿನ ಘಟನೆ ಆದದ್ದು ಕೃಷ್ಣ ಮಠದ ಹಿಂದಿನ ಗೇಟ್ ಬಳಿ. ಆದಿನ ನನ್ನ ಸಮಕ್ಷಮ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ನನಗೆ ಗಾಯವಾಗಿ ರಕ್ತ ಬರುತ್ತಿದ್ದುದರಿಂದ ಘಟನೆಯನ್ನು ನೋಡಿಲ್ಲ. ನಾನು ಪೊಲೀಸರಿಗೆ ಆತ್ಮೀಯ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಸಾಕ್ಷಿದಾರರನ್ನಾಗಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

-ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

**ಪಿ.ಡಬ್ಲ್ಯೂ.1/ಸಿ.ಡಬ್ಲ್ಯೂ.3**